**DEPARTMENT OF GENERAL EDUCATION, KERALA**

# FIRST TERM EVALUATION 2015 -16

## KANNADA PAPER - I Sample Question Paper - 2015-16

## ಕನ್ನಡ - I ಮಾದರಿ ಪ್ರಶ್ನೆಗಳು

**STD VIII** **Score : 40**
**Time : 1½ hrs**

---

**ಕಲಿಕಾ ಸಾಧನೆ :**

ಗದ್ಯ, ಪದ್ಯ ಮೊದಲಾದವುಗಳನ್ನು ಬಳಕೆಯಾಗಿರುವ ಪದಪ್ರಯೋಗ, ಶೈಲಿ ಇತ್ಯಾದಿಗಳ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಬಳಸುವುದು.

**ಚಿಂತನಾ ಸಾಮರ್ಥ್ಯ :**

ಪದ ಗುರುತಿಸುವುದು ಮತ್ತು ವಾಕ್ಯದಲ್ಲಿ ಪ್ರಯೋಗಿಸುವುದು.

**ಘಟಕ 1**

1. ಇಳೆವೆಣ್ಣು ಮೈದೊಳೆದು ಮಕರಂದದರಿಶಿಣದಿ (2)
ಹೂಮುಡಿದು ಮದುಮಗಳ ಹೋಲುತ್ತಿತ್ತು –
ಈ ಪದ್ಯದ ಸಾಲುಗಳಲ್ಲಿ 'ಭೂಮಿ' ಎಂಬ ಪದಕ್ಕೆ ಸಮಾನಾರ್ಥವಿರುವ ಪದ ಯಾವುದು?
ಈ ಪದವನ್ನು ಬಳಸಿ ಸ್ವಂತವಾಕ್ಯವೊಂದನ್ನು ರಚಿಸಿರಿ.

**ಮೌಲ್ಯಮಾಪನ ಸೂಚಕಗಳು**

- ಸಮಾನಾರ್ಥವಿರುವ ಪದವನ್ನು ಗುರುತಿಸಲಾಗಿದೆ. (1)
- ಆ ಪದವನ್ನು ಬಳಸಿ ಸ್ವಂತವಾಕ್ಯ ಮಾಡಲಾಗಿದೆ. (1)

**ಕಲಿಕಾ ಸಾಧನೆ :**

ಸೃಜನಾತ್ಮಕ ರಚನೆಗಳಲ್ಲಿರುವ ವಸ್ತು, ಶೈಲಿ, ಹಾಗೂ ಆಶಯಗಳನ್ನು ಅರ್ಥೈಸಿಕೊಂಡು ಬೇರೊಂದು ಪ್ರಕಾರಕ್ಕೆ ಬದಲಾಯಿಸುವುದು.

**ಚಿಂತನಾ ಸಾಮರ್ಥ್ಯ :**

ಪ್ರಶ್ನೆಯನ್ನು ವಿಶ್ಲೇಷಿಸಿ ಆಶಯ ಪೂರ್ಣವಾಗಿ ಮಂಡಿಸುವುದು.

**ಘಟಕ 2**

2. "ನನಗೆ ತುಂಬಾ ಒತ್ತಡದ ಕೆಲಸವಿದೆ. ತೊಂದರೆ ಕೊಡಬೇಡಿ" ಎಂದು ಲೇಖಕರು ಸೇಲ್ಸ್‌ಮ್ಯಾನ್‌ನಲ್ಲಿ ಹೇಳಿದಾಗ ಅವನು ಹೇಳಿದ ಕಥೆ ಯಾವುದು? 'ತಾಳಿದವನು ಬಾಳಿಯಾನು' ಎಂಬ ಪಾಠದಲ್ಲಿರುವ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ. (5)

**ಮೌಲ್ಯಮಾಪನ ಸೂಚಕಗಳು**

ತರಕಾರಿಯನ್ನು ತೆಗೆದುಕೊಂಡು ರೈತ ಮತ್ತು ಮಗನ ಪ್ರಯಾಣ, ಚಿಕ್ಕಪ್ಪನ ಭೇಟಿ, ಹಂಸಗಳ ಕೊಳದ ದಾರಿಯಾಗಿ ಹೋಗುವುದು, ರೈತನೊಬ್ಬನಿಗೆ ಸಹಾಯ ಮಾಡುವುದು, ಪಟ್ಟಣದ ಹೃದಯವಿದ್ರಾವಕ ದೃಶ್ಯ ಇತ್ಯಾದಿಗಳನ್ನು ಕ್ರಮಬದ್ಧವಾಗಿ ಬರೆಯಲಾಗಿದೆ. (5)

- ನಾಲ್ಕು ಘಟನೆಗಳನ್ನು ಮಾತ್ರ ಬರೆದಿದ್ದರೆ (4)
- ಮೂರು ಘಟನೆಗಳನ್ನು ಮಾತ್ರ ಬರೆದಿದ್ದರೆ (3)
- ಕೇವಲ ಒಂದೆರಡು ಘಟನೆಗಳನ್ನು ಮಾತ್ರ ಬರೆದಿದ್ದರೆ (2)

**ಕಲಿಕಾ ಸಾಧನೆ :**

ಗದ್ಯ, ಪದ್ಯ ಮೊದಲಾದವುಗಳನ್ನು ಬಳಕೆಯಾಗಿರುವ ಪದ ಪ್ರಯೋಗ, ಶೈಲಿ ಇತ್ಯಾದಿಗಳ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಪ್ರಯೋಗಿಸುವುದು.

**ಚಿಂತನಾ ಸಾಮರ್ಥ್ಯ :**

ಸಂವಾದಿಯಾದ ಪದ ಗುರುತಿಸುವುದು.

**ಘಟಕ 3**

3. ಹರಿಹರ್ಗದ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಸರಸಮ್ಮ, ತನ್ನ ಮಗಳ ಮದುವೆಗಾಗಿ ಅಡ್ವಾನ್ಸ್ ಪಡೆದಳು. (2)

ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಅನ್ಯದೇಶೀಯ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬಳಸಿ ವಾಕ್ಯವನ್ನು ಪುನಾರಚಿಸಿರಿ.

**ಮೌಲ್ಯಮಾಪನ ಸೂಚಕಗಳು**

- ಎರಡು ವಾಕ್ಯಗಳಲ್ಲಿ ಎರಡು ಸಂವಾದಿ ಪದಗಳನ್ನು ಬಳಸಿ ಆ ವಾಕ್ಯವನ್ನು ಪುನಾರಚಿಸಲಾಗಿದೆ.
- ಒಂದು ಪದ, ಮಾತ್ರ ಬಳಸಿ ವಾಕ್ಯ ತಯಾರಿಸಲಾಗಿದೆ/ಸಂವಾದಿಯಾದ ಎರಡು ಪದಗಳನ್ನು ಮಾತ್ರ ಬರೆಯಲಾಗಿದೆ. (1)

**ಕಲಿಕಾ ಸಾಧನೆ :**

ಕಥೆ, ಕವನ ಮೊದಲಾದ ಸಾಹಿತ್ಯ ಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸ್ವಂತ ದೃಷ್ಟಿಕೋನದೊಂದಿಗೆ ಮೌಖಿಕವಾಗಿ ಮತ್ತು ಲಿಖಿಕವಾಗಿ ಮಂಡಿಸುವುದು.

**ಚಿಂತನಾ ಸಾಮರ್ಥ್ಯ :**

ಪ್ರಶ್ನೆಯನ್ನು ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳೊಂದಿಗೆ ವ್ಯಾಖ್ಯಾನಿಸುವುದು.

**ಘಟಕ 3**

4. ಈ ಕೆಳಗೆ ಕೊಡಲಾದ ಪದ್ಯದ ಸ್ವಾರಸ್ಯವನ್ನು ಬರೆಯಿರಿ. (3)

ನಿನಮಾತು ದೀಪವಾಗಿ ನನಬಾಳಿಗೆ ಬೆಳಕಾಗಿ
ಇರಲಿ ಎಂದೆಂದು ಸ್ಥಿರವಾಗಿ/ ಅಣ್ಣಯ್ಯ
ನಿನ ರಕ್ಷಣೆ ನನಗಿರಲಿ

**ಮೌಲ್ಯಮಾಪನ ಸೂಚಕಗಳು**

- ಆಶಯವನ್ನು ಸಂಕ್ಷಿಪ್ತವಾಗಿ ಬರೆಯಲಾಗಿದೆ. (1)
- ಕತ್ತಲಲ್ಲಿ ತಡವರಿಸದಂತೆ, ಬೆಳಕು ಇರುವಂತೆ ಬಾಳಿನಲ್ಲಿ ಎದುರಾಗುವ ಕಷ್ಟಗಳಿಗೆ ಪರಿಹಾರವಾಗಿ ಅಣ್ಣನ ಮಾತುಗಳು ದಾರಿದೀಪವಾಗಿರಲಿ ಎಂಬ ಆಶಯವನ್ನೊಳಗೊಂಡ ವಾಕ್ಯಗಳನ್ನು ಬರೆಯಲಾಗಿದೆ. (2)

**ಕಲಿಕಾ ಸಾಧನೆ :**

ಸೃಜನಾತ್ಮಕ ರಚನೆಗಳಲ್ಲಿರುವ ವಸ್ತು, ಶೈಲಿ ಹಾಗೂ ಆಶಯಗಳನ್ನು ಅರ್ಥೈಸಿಕೊಂಡು ಬೇರೊಂದು ಪ್ರಕಾರಕ್ಕೆ ಬದಲಾಯಿಸುವುದು.

**ಚಿಂತನಾ ಸಾಮರ್ಥ್ಯ :**

ಪ್ರಶ್ನೆಯನ್ನು ವಿಶ್ಲೇಷಿಸಿ ಆಶಯ ಪೂರ್ಣತೆಯೊಂದಿಗೆ ನಿಗಮನಕ್ಕೆ ತಲಪುವುದು.

**ಘಟಕ – 4**

5. ಪ್ಲಾಸ್ಟಿಕ್ ಎನ್ನುವುದು ನೆಲ, ಜಲ, ವಾಯುವಿನಲ್ಲಿ ಬೆರೆತು ಹಾನಿಕಾರಕ ಪರಿಣಾಮಗಳನ್ನುಂಟುಮಾಡುತ್ತದೆ. ಇದು ಪರಿಸರ ನಾಶಕ್ಕೆ ಹೇಗೆ ಕಾರಣವಾಗುತ್ತದೆ? ಇದಕ್ಕೆ ಪರಿಹಾರವೇನು? ಸ್ವಂತ ಅಭಿಪ್ರಾಯಗಳೊಂದಿಗೆ ವಿವರಿಸಿ ಬರೆಯಿರಿ. (5)

**ಮೌಲ್ಯಮಾಪನ ಸೂಚಕಗಳು**

- ಪ್ಲಾಸ್ಟಿಕ್ ನೆಲಮಾಲಿನ್ಯವಾಗುವ ರೀತಿಯನ್ನು ಬರೆಯಲಾಗಿದೆ. (1)
- ಜಲಮಾಲಿನ್ಯವಾಗುವ ರೀತಿಯನ್ನು ಬರೆಯಲಾಗಿದೆ. (1)
- ವಾಯುಮಾಲಿನ್ಯದ ಬಗ್ಗೆ ಬರೆಯಲಾಗಿದೆ. (1)
- ಪರಿಹಾರವನ್ನು ಸೂಚಿಸಲಾಗಿದೆ. (1)
- ಉತ್ತಮ ಶೈಲಿ, ಸ್ವಂತ ಅಭಿಪ್ರಾಯದೊಂದಿಗೆ ಬರೆಯಲಾಗಿದೆ. (1)

**ಕಲಿಕಾ ಸಾಧನೆಗಳು :**

ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯಗಳನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.

**ಚಿಂತನಾ ಸಾಮರ್ಥ್ಯ :**

ಪ್ರಶ್ನೆಯನ್ನು ವಿಶ್ಲೇಷಿಸಿ ಸ್ವಂತ ಅಭಿಪ್ರಾಯದೊಂದಿಗೆ ಸಮರ್ಥಿಸಿ ಬರೆಯುವುದು.

**ಘಟಕ 4**

6. ನಮ್ಮ ಪರಿಸರದಲ್ಲಿ ಇಂದು ಹಲವಾರು ಪಕ್ಷಿ, ಮೃಗಾದಿಗಳ ನಾಶವಾಗುತ್ತಿವೆ. ಇದಕ್ಕೆ ಯಾರು ಕಾರಣರು? ನಶಿಸಿ ಹೋಗುತ್ತಿರುವ ಜೀವಜಾಲವನ್ನು ಹೇಗೆ ಸಂರಕ್ಷಿಸಬಹುದು? (4)

**ಮೌಲ್ಯಮಾಪನ ಸೂಚಕಗಳು**

- ಮಾನವನ ಚಟುವಟಿಕೆಗಳು ಜೀವಜಾಲಗಳ ನಾಶಕ್ಕೆ ಕಾರಣ ಎಂದು ಬರೆಯಲಾಗಿದೆ. (1)
- ನೆಲ, ಜಲ, ವಾಯು ಮಾಲಿನ್ಯಗಳಾಗುವುದನ್ನು ತಡೆಯಬೇಕು ಎಂದು ಬರೆಯಲಾಗಿದೆ. (1)
- ಸಂರಕ್ಷಣೆಯ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಎಂಬ ಸ್ವಂತ ಅಭಿಪ್ರಾಯವನ್ನು ಬರೆಯಲಾಗಿದೆ. (2)

**ಕಲಿಕಾ ಸಾಧನೆಗಳು**

ಕಥೆ, ಕವನ ಮೊದಲಾದ ಸಾಹಿತ್ಯ ಕೃತಿಗಳಲ್ಲಿರುವ ಸೌಂದರ್ಯಾಂಶಗಳನ್ನು ತಿಳಿದುಕೊಂಡು ಸೂಕ್ತವಾದ ಪದಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿಕೊಂಡು (ಕಥೆ, ಕವನ, ಪಾತ್ರ ಚಿತ್ರಣ) ಭಾಷಾ ವ್ಯವಹಾರ ಪ್ರಕಾರಗಳನ್ನು ರಚಿಸುವುದು.

**ಚಿಂತನಾ ಸಾಮರ್ಥ್ಯ**

ವಿಶ್ಲೇಷಿಸಿ ಮಂಡಿಸುವುದು. ಕಾರ್ಯಕಾರಣ ಸಂಬಂಧವನ್ನು ತಿಳಿಯುವುದು.

**ಘಟಕ – 5**

7. 'ಏಕಲವ್ಯನ ಸಾಧನೆ' ಎಂಬ ಪಾಠದಲ್ಲಿ ಏಕಲವ್ಯ, ದ್ರೋಣಾಚಾರ್ಯ, ಅರ್ಜುನ ಮೊದಲಾದ ಕಥಾಪಾತ್ರಗಳನ್ನು ತಿಳಿದಿರಲ್ಲವೇ?

- ಇವರಲ್ಲಿ ನಿಮಗೆ ಇಷ್ಟವಾದ ಕಥಾಪಾತ್ರ ಯಾವುದು? ಯಾಕೆ?
- ಅವರ ಸ್ವಭಾವ ವಿಶೇಷತೆಗಳು.
- ಕಥೆಯಲ್ಲಿ ಇವರ ಸ್ಥಾನ – ಇತ್ಯಾದಿಗಳನ್ನೊಳಗೊಂಡ ಪಾತ್ರಚಿತ್ರಣ ಬರೆಯಿರಿ. (5)

**ಮೌಲ್ಯಮಾಪನ ಸೂಚಕಗಳು**

- ಕಥಾಪಾತ್ರದ ಸ್ವಭಾವ, ವಿಶೇಷತೆಗಳನ್ನು ಗುರುತಿಸಿ ಕಥಾಪಾತ್ರದ ಸ್ಥಾನವನ್ನು ಕಂಡುಕೊಂಡು ಸ್ವಂತ ಅಭಿಪ್ರಾಯದೊಂದಿಗೆ ಸೂಕ್ತವಾದ ಭಾಷೆ, ಶೈಲಿಯೊಂದಿಗೆ ಬರೆಯಲಾಗಿದೆ. (5)
- ಯಾವುದಾದರೂ ನಾಲ್ಕು ವಿಚಾರಗಳನ್ನು ಬರೆಯಲಾಗಿದೆ. (4)
- ಯಾವುದಾದರೂ ಮೂರು ವಿಚಾರಗಳನ್ನು ಬರೆಯಲಾಗಿದೆ. (3)
- ಯಾವುದಾದರೂ ಎರಡು ವಿಚಾರಗಳನ್ನು ಬರೆಯಲಾಗಿದೆ. (2)
- ಇಷ್ಟವಾದ ಕಥಾಪಾತ್ರವನ್ನು ಮಾತ್ರ ಬರೆಯಲಾಗಿದೆ. (1)

**ಕಲಿಕಾ ಸಾಧನೆ**

ಗದ್ಯ, ಪದ್ಯ ಮೊದಲಾದವುಗಳನ್ನು ಬಳಕೆಯಾಗಿರುವ ಪದಪ್ರಯೋಗ, ಶೈಲಿ ಇತ್ಯಾದಿ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭಗಳಲ್ಲಿ ಬಳಸುವುದು.

**ಚಿಂತನಾ ಸಾಮರ್ಥ್ಯ**

ಪ್ರಶ್ನೆಯನ್ನು ವಿಶ್ಲೇಷಿಸಿ, ಕಾರ್ಯಕಾರಣ ಸಂಬಂಧವನ್ನು ಕಂಡುಕೊಂಡು ಭಾಷೆಯಲ್ಲಿ ಪ್ರಯೋಗಿಸುವುದು.

**ಘಟಕ – 5**

8. ಕೆಳಗೆ ಕೊಟ್ಟ ವಾಕ್ಯದಲ್ಲಿ ಅಡಿಗೆರೆ ಎಳೆದ ಭಾಷಾ ಪ್ರಯೋಗವನ್ನು ಬಳಸಿ ಸ್ವಂತವಾಕ್ಯ ತಯಾರಿಸಿರಿ.
ಸುಮನಾಳಿಗೆ ವೈದ್ಯಳಾಗಬೇಕೆಂಬ <u>ಕನಸು ಕುಡಿಯೊಡೆದಂದಿ</u>ನಿಂದ ಅವಳು ಚೆನ್ನಾಗಿ ಕಲಿಯತೊಡಗಿದಳು.

**ಮೌಲ್ಯಮಾಪನ ಸೂಚಕಗಳು**

- ಭಾಷಾ ಪ್ರಯೋಗದ ವೈಶಿಷ್ಟ್ಯವನ್ನು ಗಮನಿಸಿ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಲಾಗಿದೆ. (1)

**ಕಲಿಕಾ ಸಾಧನೆಗಳು :**

ವಾಕ್ಯಗಳನ್ನು ವಿಶ್ಲೇಷಿಸಿ ಸಂಧಿಗಳನ್ನು ಗುರುತಿಸುವುದು.

**ಚಿಂತನಾ ಸಾಮರ್ಥ್ಯ :**

ಹೋಲಿಸುವುದು

**ಘಟಕ – 6**

9. ಮುಖ್ಯೋಪಾಧ್ಯಾಯ – ಈ ಪದವು ಗುಣಸಂಧಿಗೆ ಉದಾಹರಣೆಯಾಗಿದೆ. ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗುವ ಪದವನ್ನು ಆರಿಸಿ ಬರೆಯಿರಿ.
(ವಿದ್ಯಾಭ್ಯಾಸ, ಮನೆಯಲ್ಲಿ, ಪರೋಪಕಾರ, ದೂರವಿರಿಸು)

**ಮೌಲ್ಯಮಾಪನ ಸೂಚಕಗಳು**

- ಪರೋಪಕಾರ ಎಂಬ ಪದವನ್ನು ಆರಿಸಿ ಬರೆಯಲಾಗಿದೆ.

**ಕಲಿಕಾ ಸಾಧನೆಗಳು :**

ಗದ್ಯಪದ್ಯ ಮೊದಲಾದವುಗಳಲ್ಲಿರುವ ಪದಪ್ರಯೋಗದ ಅರ್ಥವನ್ನು ತಿಳಿದುಕೊಂಡು ಹೊಸ ಸಂದರ್ಭದಲ್ಲಿ ಪ್ರಯೋಗಿಸುವುದು.

**ಚಿಂತನಾ ಸಾಮರ್ಥ್ಯ :**

ಪ್ರಶ್ನೆಯನ್ನು ವಿಶ್ಲೇಷಿಸುವುದು. ನಿಗಮನಕ್ಕೆ ಬರುವುದು.

**ಘಟಕ : 2**

10. ಜೀವನದಲ್ಲಿ ಸೋಲು ಬಂದಾಗ ಕಂಗೆಡದೆ ಧೈರ್ಯದಿಂದ ಎದುರಿಸಿದರೆ ಗೆಲವು ಖಂಡಿತ.

ಅಡಿಗೆರೆ ಎಳೆದ ಪದಗಳ ಅರ್ಥವನ್ನು ಗಮನಿಸಿರಿ. ಹೀಗೆಯೇ ಪರಸ್ಪರ ಸಂಬಂಧವಿರುವ ಎರಡು ಪದಗಳನ್ನು ಆವರಣದಿಂದ ಆಯ್ದುಕೊಂಡು ಒಂದು ವಾಕ್ಯ ರಚಿಸಿರಿ. (4)

(ಹಗಲು, ಸುಖ, ಹಿಗ್ಗು, ಇರುಳು, ಕುಗ್ಗು, ದುಃಖ)

**ಮೌಲ್ಯಮಾಪನ ಸೂಚಕಗಳು**

- ಯಾವುದಾದರೂ ವಿರೋದಾರ್ಥ ಪದಗಳನ್ನು ಬಳಸಿ ಸೂಕ್ತವಾಗಿ, ಅರ್ಥಪೂರ್ಣವಾಗಿ ವಾಕ್ಯ ಮಾಡಲಾಗಿದೆ. (4)
- ವಿರೋಧಾರ್ಥ ಪದಗಳನ್ನು ಬಳಸಿ ವಾಕ್ಯ ಮಾಡಲಾಗಿದೆ. (3)
- ವಿರೋಧಾರ್ಥ ಪದಗಳನ್ನು ಬಳಸಲಾಗಿದೆ. (2)
- ವಿರೋಧಾರ್ತ ಪದಗಳನ್ನು ಮತಾರ್ ಬರೆಯಲಾಗಿದೆ. (1)

***